**OS-345/2018 P.W.1**

ದಿನಾಂಕ 29.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು :</u> ಪ್ರತಿವಾದಿಯ ಪರ ವಕೀಲರಿಂದ :-

ಅಸಲು ದಾವಾ ನಂಬರ್ 344/2018 ರಲ್ಲಿ ದಾವೆ ಹಾಕಿರುವ ಲಲಿತಮ್ಮ ನನ್ನ ಹೆಂಡತಿ. ಸದರಿಯವರಿಗೆ ದಾವಾ ಆಸ್ತಿಯು ಸಹಕಾರ ಗೃಹ ಮಂಡಳಿಯಿಂದ ಖರೀದಿ ಮಾಡಿ ಬಂದಿರುತ್ತದೆ. ಸದರಿ ಗೃಹ ಮಂಡಳಿಯವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ದಾವಾ ಸ್ವತ್ತಿನ ಮೂಲ ಸರ್ವೇ ನಂಬರ್ 75. ನನ್ನ ನಿವೇಶನ ಸಹ ಸರ್ವೇ ನಂಬರ್ 75 ರಲ್ಲಿಯೇ ಬರುತ್ತದೆ. ಸರ್ವೇ ನಂಬರ್ 75 ರ ಜಮೀನು ಅನ್ಯಕ್ರಾಂತ ಆಗಿರುತ್ತದೆ. ಆ ಬಗ್ಗೆ ನಾನು ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. ಸಾಕ್ಷಿಯು ಮುಂದುವರೆದು ಆ ಬಗ್ಗೆ ದಾಖಲೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಮೂಲತಃ ಸದರಿ ಜಮೀನು ಬೆಟ್ಟದ ಹಳ್ಳಿ ಗ್ರಾಪಂ ಗೆ ಸೇರಿರುತ್ತದೆ ಎಂದರೆ ಸರಿ. ನನ್ನ ಹಾಗೂ ಸದರಿ ಲಲಿತಮ್ಮ ನವರ ನಿವೇಶನಗಳು ಅಕ್ಕಪಕ್ಕ ಇರುತ್ತದೆ. ನನ್ನ ನಿವೇಶನದ ಪಶ್ಚಿಮಕ್ಕೆ ಸದರಿ ಲಲಿತಮ್ಮ ರವರ ನಿವೇಶನ ಬರುತ್ತದೆ.

ನನ್ನ ನಿವೇಶನದ ಪೂರ್ವಕ್ಕೆ 67/4 ರಲ್ಲಿನ ನಿವೇಶನ ಬರುತ್ತದೆ. ಸದರಿ ಲಲಿತಮ್ಮ ನವರ ನಿವೇಶನ ಸಂಖ್ಯೆ 67/7. ಸದರಿಯವರ ನಿವೇಶನದ ಪೂರ್ವಕ್ಕೆ ನಿವೇಶನ ಸಂಖ್ಯೆ 67/6, ಪಶ್ಚಿಮಕ್ಕೆ ನಿವೇಶನ ಸಂಖೆ 67/8, ಉತ್ತರಕ್ಕೆ ಬಿ ಹೆಚ್ ರಸ್ತೆ, ದಕ್ಷಿಣಕ್ಕೆ ನಿವೇಶನ ಸಂಖ್ಯೆ 67/3 ಬರುತ್ತದೆ. ಪಶ್ಚಿಮಕ್ಕೆ ಗೋವಿಂದಪ್ಪನವರ ನಿವೇಶನ ಎಂದರೆ ಸರಿ. ಸದರಿ ಲಲಿತಮ್ಮನವರ ನಿವೇಶನದ ಉತ್ತರಕ್ಕೆ 67 ರ ಪೈಕಿ ಉಳಿದ ಜಾಗ ಎಂದು ಕ್ರಯಪತ್ರದಲ್ಲಿ ನಮೂದು ಇದೆ ಎಂದರೆ ಸರಿ. ನನ್ನ ದಾವೆಯಲ್ಲಿ ನನ್ನ ನಿವೇಶನ ಸಂಖ್ಯೆಯನ್ನು ನಮೂದು ಮಾಡಿರುತ್ತೇನೆ. ಸಾಕ್ಷಿಯು ಮುಂದುವರೆದು ಇ ಸ್ವತ್ತು ಸಂಖ್ಯೆಯನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ 2 ದಾವೆಗಳಲ್ಲಿ ನಾನು ನನ್ನ ನಿವೇಶನದ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಇ ಸ್ವತ್ತು ಸಂಖ್ಯೆಯನ್ನು ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಲಲಿತಮ್ಮನವರಿಗೆ ನೀಡಿರುವ ಹಕ್ಕುಪತ್ರದಲ್ಲಿ ನನ್ನ ಹೆಸರು ಇಲ್ಲ

ಎಂದರೆ ಸರಿಯಲ್ಲ. ನನಗೆ ಮತ್ತು ಲಲಿತಮ್ಮನವರಿಗೆ ಒಂದೇ ದಿನ ನಿವೇಶನವನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ನನ್ನ ಹಕ್ಕು ಪತ್ರದಲ್ಲಿ ಸಹ ಪಶ್ಚಿಮಕ್ಕೆ ಲಲಿತಮ್ಮನ ಸ್ವತ್ತು ಎಂದು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ನಿವೇಶನ ಸಂಖ್ಯೆ 67/7 ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 67/7 ರ ನಿವೇಶನ ವಿಸ್ತೀರ್ಣ 30 x 40 ಅಡಿ ಎಂದರೆ ಸರಿ. ನನ್ನ ಸ್ವತ್ತಿನ ವಿಸ್ತೀರ್ಣ 30 x 40 ಅಡಿ ಎಂದರೆ ಸರಿ. ಈಗ ನನ್ನ ನಿವೇಶನದ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ನಿವೇಶನ ಸಂಖ್ಯೆ 67/6 ರ ದಕ್ಷಿಣದ ಕಡೆಯಿಂದ ಉತ್ತರದ ಬಿ ಹೆಚ್ ರಸ್ತೆಯವರೆಗೆ ಎಷ್ಟು ಜಾಗ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

ನನ್ನ 345/2018 ರ ದಾವೆಯಲ್ಲಿನ ದಾವಾ ಆಸ್ತಿಯ ನಿವೇಶನ ಸಂಖ್ಯೆಯನ್ನು 67/6 ಎಂದು ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಇ ಸ್ವತ್ತಿನ ಸಂಖ್ಯೆಯನ್ನು ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ಎ ಶೆಡ್ಯೂಲ್ ಸ್ವತ್ತು ಎಂದರೆ ಓಡಾಡುವ ಜಾಗ ಮತ್ತು ಬಿ ಶೆಡ್ಯೂಲ್ ಜಾಗ ಎಂದರೆ ನಿವೇಶನದ ಜಾಗ. ಎ ಶೆಡ್ಯೂಲ್ ಮತ್ತು ಬಿ ಶೆಡ್ಯೂಲ್ ಸ್ವತ್ತುಗಳು ಒಂದೇ ಅಸೆಸ್ಮೆಂಟ್ ನಂಬರ್ ಎಂದರೆ ಸರಿ. ನಾನು ಬಿ ಶೆಡ್ಯೂಲ್ ಸ್ವತ್ತನ್ನು ಎ ಶೆಡ್ಯೂಲ್ ಸ್ವತ್ತಿನ ಒಂದು ಭಾಗ ಒಂದು ದಾವೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತಿನ ಅಳತೆಯನ್ನುನಾನು ತೋರಿಸಿರುವುದಿಲ್ಲ ಎಂದರೆ ಸರಿ.

ಪ್ರತಿವಾದಿಯರ ಸ್ವತ್ತು ಯಾವ ಕಡೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ನನ್ನ ವಿರುದ್ದ ಕೇಸನ್ನುಹಾಕಿರುತ್ತಾರೆ ಎಂದರೆ ಸರಿ. ಅವರು ಹಾಜರುಪಡಿಸಿರುವ ದಾಖಲೆಗಳನ್ನು ಈ ದಾವೆಯಲ್ಲಿ ನಾನು ನೋಡಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಯ ಸ್ವತ್ತು ಅಡಿಯೂರು ಗ್ರಾಮದಲ್ಲಿ 80/2 ರಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಅವರು ಶುದ್ದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅವರ ಸ್ವತ್ತಿನ ದಕ್ಷಿಣಕ್ಕೆ ಈಶ್ವರಪ್ಪರ ಖಾಲಿ ಜಾಗ ಬರುತ್ತದೆ ಎಂದರೆ ಸಾಕ್ಷಿ ಸದರಿ ಆಸ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಉತ್ತರಕ್ಕೆ ನ್ಯಾಷನಲ್ ಹೈವೇ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು 26.07.2012

ರಂದು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಮೂಲ ಮಾಲೀಕರು 2ನೇ ಪ್ರತಿವಾದಿ ಎಂದರೆ ಸರಿಯಲ್ಲ. ಆ ಪ್ರಕಾರ ಪ್ರತಿವಾದಿಯ ಹೆಸರಿಗೆ ಎಲ್ಲ ದಾಖಲಾತಿಗಳು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ಸಣ್ಣ ಉದ್ದಿಮೆಯನ್ನು ಪ್ರಾರಂಬಿಸಲು ಪರವಾನಿಗೆಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಉದ್ದಿಮೆಯನ್ನು ಆರಂಭಿಸಲು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಪರವಾನಿಗೆ ಸಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೂ ಮುಂಚೆ ಪ್ರತಿವಾದಿಯು ಸದರಿ ಜಮೀನಿನ ಅನ್ಯಕ್ರಾಂತವನ್ನು ಸಹ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ದಕ್ಷಿಣಕ್ಕೆ ಇದ್ದಂತಹ ನನಗೆ ನೋಟೀಸನ್ನು ಸಹ ನೀಡಿದ್ದರು ಎಂದರೆ ಬಂದಿಲ್ಲ. ಸದರಿ ಪ್ರತಿವಾದಿ ಆಸ್ತಿಗೆ ಮತ್ತು ನನ್ನ ಆಸ್ತಿಗೆ ಸಂಬಂಧ ಇಲ್ಲ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಯು ಕೇಸನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಸದರಿ ಆಸ್ತಿಯಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡಲು ಕೆಲಸ ಪ್ರಾರಂಭ ಮಾಡಿದಾಗ ನಾನು ಅವರಿಗೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತಕರಾರನ್ನು ಮಾಡಿದ ಕಾರಣ ಪ್ರತಿವಾದಿ ನನ್ನ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. 2018ರಲ್ಲಿ ಕಾರು ಶೆಡ್ ಗೆ ಬಾಡಿಗೆಗೆ ಕೊಟ್ಟಾಗ ಪ್ರತಿವಾದಿಯು ನನಗೆ ತೊಂದರೆ ನೀಡಿರುತ್ತಾರೆ ಆ ಸಮಯದಲ್ಲಿ ನಾನು ಪ್ರತಿವಾದಿಯ ವಿರುದ್ದ ಪೊಲೀಸ್ ದೂರನ್ನು ಸಹ ನೀಡಿರುತ್ತೇನೆ. ಸದರಿ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ದಾಖಲೆಗಳ ಪ್ರಕಾರ 30 x 40 ಅಡಿ ಜಾಗಕ್ಕೆ ಮಾತ್ರ ನನಗೆ ಹಕ್ಕು ಇದೆ ಎಂದರೆ ಸರಿ. ಅದನ್ನು ಹೊರತುಪಡಿಸಿ ಬೇರೆ ಜಾಗಕ್ಕೆ ನನಗೆ ಯಾವುದೇ ಅದಿಕಾರ ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 80/2 ರ ಆಸ್ತಿಯನ್ನು ಕಬಳಿಸಲು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ಸದರಿ ಆಸ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಸ್ವತ್ತಿನ ಮುಂದೆ ಉತ್ತರಕ್ಕೆ ಬಿ ಹೆಚ್ ರಸ್ತೆಯವರೆಗೆ ಎಷ್ಟು ಜಾಗ ಇದೆ ಎಂದು ಅಳತೆ ಮಾಡಿಸಲು ನನಗೆ ಯಾವುದೇ ತಕರಾರು ಇಲ್ಲ ಎಂದರೆ ಸರಿ.

**OS-345/2018 P.W.1**

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.